Inauguration RVCE 8th mile Programme

Vijayavani 25th March 2017



ಸುದ್ದಿ ಮಾಡುವುದಿಲ್ಲ ಎಂಬುದು 'ವಿಜಯವಾಣಿ'ಯ ಹೆಗ್ಗಳಿಕೆ.

| ಹರ್ಷಿಕಾ ಪೂಣಚ್ಚ ಖ್ಯಾತ ನಟಿ

ಬಹುಮಾನ ನೀಡುತ್ತಿದ್ದೇವೆ. ದಿನನಿತ್ಯ ಬಿಡುವಿಲ್ಲದಷ್ಟು ಫೋನ್ ಕರೆಗಳು ಬರುತ್ತಿವೆ. ಈ ಸ್ಪರ್ಧೆಯಿಂದಾಗಿ ಜನ 'ಶ್ರೀನಿಧಿ ಸಿಲ್ಕ್' ಹುಡುಕಿಕೊಂಡು ಬರುವಂತಾಗಿದೆ.

| ಗುರುನಾಥ ಶ್ರೀನಿಧಿ ಸಿಲ್ಕ್ ಮಾಲೀಕ

# ಸಾಂಸ್ಕೃತಿಕ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನ

## ಡಿ.ಪಿ. ನಾಗರಾಜ್ ಅಭಿಮತ » ಆರ್.ವಿ. ತಾಂತ್ರಿಕ ಕಾಲೇಜಿನಲ್ಲಿ '8ನೇ ಮೈಲು ಉತ್ಸವ'

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಕಾಲೇಜಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಿದರೆ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುತ್ತದೆ ಎಂದು ರಾಷ್ಟ್ರೀಯ ಶಿಕ್ಷಣ ಸಮಿತಿ ಜಂಟಿ ಕಾರ್ಯದರ್ಶಿ ಡಿ.ಪಿ.ನಾಗರಾಜ್ ಹೇಳಿದ್ದಾರೆ.

**» 3 ದಿನಗಳ ಉತ್ಸವಕ್ಕೆ ತಾರಾ ಮೆರುಗು**

ಆರ್.ವಿ. ತಾಂತ್ರಿಕ ಕಾಲೇಜು ಕ್ಯಾಂಪಸ್‌ನಲ್ಲಿ ಸ್ಪೆಕ್ಸ್ ಕಂಪನಿ ಪ್ರಾಯೋಜಕತ್ವದಲ್ಲಿ ಆಯೋಜಿಸಿರುವ '8ನೇ ಮೈಲು -2017' ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಲೇಜು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಳಕಳಿ ಮೂಡಿಸಲು ಕಿರುತೆರೆ ಚಿತ್ರ ಸ್ಪರ್ಧೆ ಸೇರಿ ಹಲವು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಮಂಡಳಿ ನಿರ್ಧರಿಸಿದೆ ಎಂದರು.

**ಪ್ರಾಯೋಜಕತ್ವಕ್ಕೆ ಮುಂದು:** ಪ್ರತಿ ವರ್ಷ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಅನೇಕ ಕಂಪೆನಿಗಳು ಪ್ರಾಯೋಜಕತ್ವಕ್ಕೆ ಮುಂದೆ ಬರುತ್ತಿರುವುದು ಕಾಲೇಜಿನ ಪ್ರತಿಷ್ಠೆಗೆ ಗರಿ ಮೂಡಿಸಿದೆ ಎಂದ ಅವರು, ಮುಂಬರುವ ದಿನಗಳಲ್ಲಿ ಇನ್ನಷ್ಟು ಮನೋರಂಜನಾತ್ಮಕ ಕಾರ್ಯಕ್ರಮ ಆಯೋಜಿಸುವುದಾಗಿ ಭರವಸೆ ಇತ್ತರು.

**ತಾರಾ ಮೆರುಗು:** ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆ ವಿಭಾಗ ಮುಖ್ಯಸ್ಥ ಎಚ್.ವಿ. ಕುಮಾರಸ್ವಾಮಿ ಮಾತನಾಡಿ, ಮೂರು ದಿನಗಳ ಉತ್ಸವದಲ್ಲಿ 75ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಲಿದ್ದು, ವಿವಿಧ ಸಂಗೀತ ವಾದ್ಯಗಳ ಮೂಲಕ ರಂಜಿಸಲಿದ್ದಾರೆ. ಬಾಲಿವುಡ್‌ನ ಅನುಷಾ ಮಾನ್ ಚಂದ್ ಉತ್ಸವದ ಮೆರುಗು ಹೆಚ್ಚಿಸಲಿದ್ದಾರೆ ಎಂದರು.

ಸ್ಪೆಕ್ಸ್ ಕಂಪನಿ ಮುಖ್ಯಸ್ಥ ಪ್ರತೀಕ್ ಷಾ, ಪ್ರಾಚಾರ್ಯ ಕೆ.ಎಸ್. ಸುಬ್ರಹ್ಮಣ್ಯ, ಹಿರಿಯ ಸಲಹೆಗಾರ ಪ್ರೊ.ಕೆ.ಎನ್. ರಾಜಾರಾವ್ ಮತ್ತಿತರರು ಉಪಸ್ಥಿತರಿದ್ದರು.

ಆರ್.ವಿ. ತಾಂತ್ರಿಕ ಕಾಲೇಜಿನಲ್ಲಿ '8ನೇ ಮೈಲು - 2017' ಉತ್ಸವಕ್ಕೆ ಡಿ.ಪಿ. ನಾಗರಾಜ್ ಚಾಲನೆ ನೀಡಿದರು. ಉದ್ಯಮಿ ಪ್ರತೀಕ್ ಷಾ, ಪ್ರಾಚಾರ್ಯ ಕೆ.ಎಸ್.ಸುಬ್ರಹ್ಮಣ್ಯ ಮತ್ತಿತರರಿದ್ದರು.